## ಇಲ್ಲಿಯವರೆಗೆ



ಕೋಟೆ ಬಂಗಲೆಗೆ ಭೇಟಿ ನೀಡಿದ ಹೇಮಂತ ವಾಪಸ್ ಹೋಗುತ್ತಾನೆ. ಮನೆ ಮುಟ್ಟುವ ಮೊದಲು ಅವನ ಮೇಲೆ ಅಪರಿಚಿತರು ದಾಳಿ ನಡೆಸಿ ಹಲ್ಲೆ ಮಾಡುತ್ತಾರೆ.

ಹೇಮಂತ ಬಂದಿದ್ದು ಋತು ಮನಸ್ಸಿಗೆ ಖುಷಿಯಾಗಿದ್ದರೂ ಟೆರೇಸ್ ಮೇಲೆ ಯಾರೋ ಗಮನಿಸಿದ್ದನ್ನು ನೆನಪಿಸಿಕೊಂಡು ಆತಂಕಗೊಳ್ಳುತ್ತಾಳೆ. ರಮ್ಯ ಇದನ್ನು ಗಮನಿಸಿ ಕೇಳಿದಾಗ ಆಪ್ತ ಗೆಳತಿಯ ಬಳಿ ಎಲ್ಲವನ್ನೂ ಹೇಳಿಕೊಳ್ಳುತ್ತಾಳೆ. ಒಂದು ದಿನ ಲಾಲ್‌ಬಾಗಿಗೆ ಪಿಕ್‌ನಿಕ್ ಹೋಗುವ ನಿರ್ಧಾರ ಮಾಡುತ್ತಾರೆ. ಇದಕ್ಕಾಗಿ ಹೇಮಂತನನ್ನೂ ಆಹ್ವಾನಿಸುತ್ತಾರೆ. ಆದರೆ ಆತ ಬ್ಯುಸಿ ಎಂದು ಹೇಳಿ ಬರುವುದಿಲ್ಲ. ಋತು ಕುಟುಂಬದ ಜತೆಗೆ ರಮ್ಯಳೂ ಲಾಲ್‌ಬಾಗ್ ಪಿಕ್‌ನಿಕ್ ಹೋಗಿ ಸುತ್ತಾಡಿ ವಾಪಸ್ ಬರುವಾಗ ಅವರೆಲ್ಲರಿಗೊಂದು ಆಘಾತ ಕಾದಿರುತ್ತದೆ. ಕೋಟೆ ಬಂಗಲೆಯ ಸಮೀಪವೇ ಇರುವ ಸಂಪಿಗೆ ಮರಕ್ಕೆ ಬೆಂಕಿ ಹತ್ತಿಕೊಳ್ಳುತ್ತದೆ. ಇದರಿಂದ ಮನೆಮಂದಿಯೆಲ್ಲ ಆತಂಕಕ್ಕೆ ಒಳಗಾಗುತ್ತಾರೆ.

ಹೇಮಂತ ಈ ಮನೆ ಅಳಿಯ ಆಗಿ ಬರುತ್ತಾನೆ ಎಂದು ತಿಳಿದ ಮೇಲೆ ಇಷ್ಟೊಂದು ಅನಾಹುತಗಳಾಗುತ್ತಿವೆ ಎಂದು ಕಲಾವತಿ ಹೇಳಿದಾಗ ಋತು ಇನ್ನಷ್ಟು ಖಿನ್ನಳಾಗುತ್ತಾಳೆ.

---

ಪ್ರಶಾಂತನ ಕೊಲೆಯಾಗಿ ಹತ್ತು ದಿನಗಳಾಗಿದ್ದವು. ಪೊಲೀಸರಿಗೆ ಕೊಲೆಗಾರನನ್ನು ಪತ್ತೆ ಹಚ್ಚಲಾಗಿರಲಿಲ್ಲ. ಮತ್ತೆ ನಡೆದ ಜೋಡಿ ಕೊಲೆಗಳನ್ನು ತಡೆಯಲಾಗಿರಲಿಲ್ಲ. ಕಾಲೇಜಿನ ಆವರಣದೊಳಗೆ ಪೋಷಕರೆಲ್ಲರೂ ನಿಧಾನವಾಗಿ ಜಮಾಯಿಸತೊಡಗಿದ್ದರು. ಅವರೆಲ್ಲರ ಆಕ್ರೋಶ ಇನ್ನೂ ಕೊಲೆಗಾರನನ್ನು ಪತ್ತೆ ಹಚ್ಚಲಾಗದ ಪೊಲೀಸರ ಮೇಲೆ, ಈ ದುರ್ಘಟನೆಗೆ ಸಾಕ್ಷಿಯಾಗಿ ನೋಡುತ್ತಾ ನಿಂತಿದ್ದ ಕಾಲೇಜಿನ ಆಡಳಿತ ಮಂಡಳಿಯ ಮೇಲೆ ತಿರುಗಿತ್ತು. ಕೆಲವರಂತೂ ಕಾಲೇಜಿನ ಕಟ್ಟಡದ ಕಡೆಗೆ ಕಲ್ಲುತೂರಾಟ ನಡೆಸುತ್ತಾ ವಿಧ್ವಂಸಕ ಕೃತ್ಯದಲ್ಲಿ ತೊಡಗಿಕೊಳ್ಳತೊಡಗಿದ್ದರು. ಅವರನ್ನೆಲ್ಲಾ ನಿಯಂತ್ರಣಕ್ಕೆ ತರುವಷ್ಟರಲ್ಲಿ ಪೊಲೀಸರಿಗೆ ಸಾಕುಸಾಕಾಯಿತು.

ಇತ್ತ ಹಾಸ್ಟೆಲ್ಲಿನ ರೂಮಿನೊಳಗೆ ಅಜಯ್ ಕುಲಕರ್ಣಿಯ ತಂಡ ಜೋಡಿ ಕೊಲೆಯಾದ ಶವಗಳ ಪರಿಶೀಲನೆಯಲ್ಲಿ ತೊಡಗಿತ್ತು. ಅವರೊಂದಿಗೆ ಖಾಸಗಿ ಪತ್ತೇದಾರ ಹೇಮಂತ ಕುಮಾರನೂ ಇದ್ದ.

ಇಬ್ಬರು ವಿದ್ಯಾರ್ಥಿಗಳೂ ಭೀಕರವಾಗಿ ಕೊಲೆಯಾಗಿದ್ದರು. ಕುತ್ತಿಗೆಯ ಭಾಗದಲ್ಲಿ ಕಚ್ಚಿ ಗಾಯಗೊಳಿಸಿ ಆಳವಾದ ಗಾಯವನ್ನೇ ಮಾಡಲಾಗಿತ್ತು. ಕೊಲೆಯಾದ ಶವಗಳ ಪ್ರಾಥಮಿಕ ತನಿಖೆಯನ್ನು ಮುಗಿಸಿತ್ತು ಪೊಲೀಸರ ತಂಡ. ಸೂಕ್ಷ್ಮವಾಗಿ ಸ್ವರೂಪನ ಶವವನ್ನು ಪರೀಕ್ಷಿಸುತ್ತಿದ್ದ ಹೇಮಂತನ ದೃಷ್ಟಿಗೆ ಅವನ ಮುಷ್ಟಿಯಲ್ಲಿ ಬಿಗಿ ಹಿಡಿದಿದ್ದ ಜೊಂಪೆ ತಲೆಗೂದಲು ಕಂಡಿತು. ಆ ರೂಮಿನ ಸ್ಥಳ ಪರಿಶೀಲನೆಯನ್ನು ಮಾಡುವಾಗ ಟೇಬಲ್ಲಿನ ಹಿಂದೆ ರೋಮದಂತಹ ವಸ್ತುವೂ ಕಂಡಿತು. ಬಾಗಿ ಅದನ್ನೆತ್ತಿಕೊಂಡ ಹೇಮಂತ. ಅದೊಂದು ತೋಳದ ಮುಖವಾಡವಾಗಿತ್ತು. ಕೊಲೆಗಾರ ಈ ಮುಖವಾಡ ತೊಟ್ಟು ಹಾಸ್ಟೆಲ್ಲಿನ ರೂಮಿನೊಳಗೆ ಬಂದಿದ್ದಾನೆ, ಸ್ವರೂಪ ಅವನನ್ನು ಎದುರಿಸಿ ಹೋರಾಡಿ ಮುಖವಾಡವನ್ನು ಕಿತ್ತೆಸೆದು, ಅವನ ತಲೆಗೂದಲನ್ನು ಜಗ್ಗಾಡಿದ್ದಾನೆ. ಅದರಿಂದಲೇ ಸ್ವರೂಪನ ಶವದ ಮುಷ್ಟಿಯಲ್ಲಿ ಜೊಂಪೆ ತಲೆಗೂದಲಿವೆ. ತನ್ನ ಕೊನೆಗಾಲದಲ್ಲಿ ಅವನು ತೋರಿದ ಧೈರ್ಯಕ್ಕೆ ಶಹಭಾಸ್ ಕೊಟ್ಟ ಹೇಮಂತನ ದೃಷ್ಟಿ ಆ ರೂಮಿನ ತುಂಬಾ ಚೆಲ್ಲಾಡಿದ್ದ ಪುಟ್ಟ ರುದ್ರಾಕ್ಷಿಗಳತ್ತ ಹೊರಳಿತು. ಅನುಮಾನವೇ ಇಲ್ಲ, ಇದು ಕೊಲೆಗಾರ ಧರಿಸಿದ್ದ ರುದ್ರಾಕ್ಷಿಗಳೇ. ಸ್ವರೂಪ ತಾನು ಸತ್ತರೂ ಕೊಲೆಗಾರನ ಬಗ್ಗೆ ಬಹಳಷ್ಟು ಸುಳಿವುಗಳು ತಿಳಿಯುವಂತೆ ಮಾಡಿದ್ದಾನೆ.

'ಅಜಯ್....ಇನ್ನೇನೂ ಹೆದರುವ ಅಗತ್ಯ ಇಲ್ಲ, ಕೊಲೆಗಾರ ಬಹಳಷ್ಟು ಕ್ಲೂಗಳನ್ನು ಬಿಟ್ಟು ಹೋಗಿದ್ದಾನೆ, ಕಳೆದ ಸಲದಂತೆ ಈ ಸಲ ಅವನು ಖಂಡಿತಾ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ...'

ಹೇಮಂತ ಆತ್ಮವಿಶ್ವಾಸದಿಂದ ಹೇಳಿದಾಗ ಅಜಯ್ ಕುಲಕರ್ಣಿಗೂ ನಿರಾಳವಾಯಿತು.

ಇದು ಅವರ ಸತ್ವಪರೀಕ್ಷೆಯ ಕಾಲ. ಈ ಕೇಸಿನಲ್ಲಿ ಕೊಲೆಗಾರನನ್ನು ಕಂಡು ಹಿಡಿಯದಿದ್ದರೆ ಆಗುವ ಅನಾಹುತವನ್ನು ಊಹಿಸಲೂ ಸಾಧ್ಯವಿಲ್ಲ. ಜನಪರ ವಿದ್ಯಾಸಂಸ್ಥೆಯಾದ ಜ್ಞಾನದೇಗುಲ ಶಾಶ್ವತವಾಗಿ ಮುಚ್ಚಿ ಹೋಗುತ್ತದೆ. ಮೇಲಧಿಕಾರಿಗಳಿಂದ ಅಜಯ್ ಕುಲಕರ್ಣಿ ನಿಂದೆಗೆ ಗುರಿಯಾಗುತ್ತಾನೆ. ಪ್ರಖ್ಯಾತ ಖಾಸಗಿ ಪತ್ತೇದಾರ ಹೇಮಂತ ಕುಮಾರನಿಗೂ ಶಾಶ್ವತ ಕಪ್ಪು ಚುಕ್ಕೆ ಮೂಡುತ್ತದೆ. ಎಲ್ಲದಕ್ಕಿಂತ ಹೆಚ್ಚಾಗಿ ನಗರದ ಜನತೆ ಹೆಚ್ಚು ಭಯಭೀತರಾಗುತ್ತಾರೆ. ಪೊಲೀಸ್ ವ್ಯವಸ್ಥೆಯ ಮೇಲೆಯೇ ನಂಬಿಕೆ ಕಳೆದುಕೊಳ್ಳುತ್ತಾರೆ.

ಮತ್ತೆ ಅಜಯ್ ಕುಲಕರ್ಣಿ ತಡ ಮಾಡಲಿಲ್ಲ. ಸ್ವರೂಪನ ಶವದ ಮುಷ್ಟಿಯಲ್ಲಿ ಸಿಲುಕಿದ್ದ ತಲೆಗೂದಲನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸುವ ವ್ಯವಸ್ಥೆ ಮಾಡಿದ. ಬೆರಳಚ್ಚು ತಜ್ಞರು, ಛಾಯಾಗ್ರಾಹಕರು ತಮ್ಮ ಕೆಲಸಗಳನ್ನು ಮುಗಿಸಿದ್ದರು. ಶವಗಳನ್ನು ಪೋಸ್ಟ್‌ಮಾರ್ಟಂಗೆ ಕಳುಹಿಸುವ ವ್ಯವಸ್ಥೆ ಮಾಡಿ ಇಬ್ಬರೂ ಹೊರಬಂದಾಗ ಬಿಸಿಲೇರುತ್ತಿತ್ತು. ಗಲಾಟೆಯನ್ನು ಪೊಲೀಸರು ನಿಯಂತ್ರಿಸಿದ್ದರಿಂದ ವಾತಾವರಣ ಒಂದಷ್ಟು ತಿಳಿಯಾಗಿತ್ತು.

ಮುತ್ತಿಗೆ ಹಾಕಿದ ವಿವಿಧ ಮಾಧ್ಯಮಗಳ ಪ್ರತಿನಿಧಿಗಳಿಗೆ ಕೊಲೆಗಳ ಬಗ್ಗೆ ಒಂದಷ್ಟು ವಿವರ ನೀಡಿ ಆದಷ್ಟೂ ಬೇಗ ಕೊಲೆಗಾರನನ್ನು ಕಂಡು ಹಿಡಿಯುವ ಭರವಸೆಯನ್ನು ಅಜಯ್ ನೀಡಿದ.

### ಒಂದಲ್ಲ-ಎರಡಲ್ಲ-ಮೂರು ಕೊಲೆಗಳು!

ಮೂರು ಕೊಲೆಗಳು ನಡೆದಿವೆ....ಕೊಲೆಗಾರ ಯಾವುದೇ ವಸ್ತುವನ್ನು ಕಳುವು ಮಾಡಿಲ್ಲ, ಕೇವಲ ಮೃಗೀಯ ರೀತಿಯಲ್ಲಿ ಮೂರೂ ವಿದ್ಯಾರ್ಥಿಗಳ ಮೇಲೆ ಆಕ್ರಮಣ ನಡೆದಿದೆ.. ಹಾಗಾದರೆ ಕೊಲೆಗಾರ ನರಭಕ್ಷಕನೇ? ಕೇವಲ ಮಾನವ ರಕ್ತವನ್ನು ಹೀರುವುದಕ್ಕಾಗಿ ಮಾತ್ರವೇ ಈ ಕೊಲೆ ನಡೆದಿದೆಯೇ? ಇನ್ನು ನಗರದಲ್ಲಿ ಈ ರಕ್ತಪಿಪಾಸು ಏನೆಲ್ಲಾ ಅನಾಹುತಗಳನ್ನು ಮಾಡಲಿದ್ದಾನೋ.. ಎಂಬೆಲ್ಲಾ ವಿಷಯಗಳು ದೂರದರ್ಶನದ ವಿವಿಧ ಚಾನಲ್‌ಗಳಲ್ಲಿ, ದಪ್ಪ ಅಕ್ಷರಗಳಲ್ಲಿ ಪ್ರಸಾರವಾಗತೊಡಗಿದಾಗ ನಗರದ ಜನ ಬೆಚ್ಚಿ ಬಿದ್ದರು. ಆ ರಕ್ತಪಿಪಾಸು ಇನ್ನು ಎಲ್ಲಿ, ಯಾರ ಮನೆಯಲ್ಲಿ ರಕ್ತ ಹೀರಲು ಬರುತ್ತಾನೋ ಎಂಬ ಸಾಂಕ್ರಾಮಿಕ ಭಯ ಎಲ್ಲರಲ್ಲೂ ನಡುಕ ಹುಟ್ಟಿಸತೊಡಗಿತ್ತು.

ಮಾಧ್ಯಮದವರಿಂದ ತಪ್ಪಿಸಿಕೊಂಡ ಅಜಯ್, ಗೆಳೆಯ ಹೇಮಂತನೊಂದಿಗೆ ಪ್ರಿನ್ಸಿಪಾಲ್ ಭುವನೇಶ್ವರಿಯನ್ನು ಭೇಟಿಯಾದ. ಅವರು ತಮ್ಮ ಕ್ಯಾಬಿನ್ನಿನಲ್ಲಿ ಕಾಲೇಜಿನ ಸಂಸ್ಥಾಪಕಿ ಪಾರಿಜಾತರೊಂದಿಗೆ ಕುಳಿತಿದ್ದರು. ಅವರಿಬ್ಬರ ಮುಖದಲ್ಲೂ ಸ್ಮಶಾನ ಕಳೆ, ಮುಂದೇನು ಎಂಬ ಆತಂಕ....

ಅವರಿಬ್ಬರನ್ನು ಮುಂದಿನ ಕುರ್ಚಿಗಳಲ್ಲಿ ಕುಳಿತುಕೊಳ್ಳಿರೆಂದು ಭುವನೇಶ್ವರಿ ಸನ್ನೆ ಮಾಡಿದಾಗ ಇಬ್ಬರೂ ಕುಳಿತುಕೊಂಡರು.

ಅಜಯ್ ಕುಲಕರ್ಣಿ, ನಿಮ್ಮ ಇನ್ವೆಸ್ಟಿಗೇಷನ್ ಎಲ್ಲಿಯವರೆಗೆ ಬಂದಿದೆ? ನಾವು ಹತ್ತು ದಿನಗಳಲ್ಲೇ ಮೂರು ಕೊಲೆಗಳನ್ನು ನೋಡಿಯಾಯ್ತು, ಆದ್ರೂ ನಿಮ್ಮಿಂದ ಏನೂ ಮಾಡೋಕಾಗ್ಲಿಲ್ಲ....

ಪಾರಿಜಾತ ನೊಂದು ನುಡಿದಾಗ ಅಜಯ್ ಹಣೆಯುಜ್ಜಿಕೊಳ್ಳುತ್ತಾ ಗೆಳೆಯ ಹೇಮಂತನತ್ತ ನೋಡಿದ. ಅವನು ಕಂಗಳಲ್ಲೇ ಗೆಳೆಯನಿಗೆ ಧೈರ್ಯ ತುಂಬಿದ.

'ಮೇಡಂ, ನಿಮ್ಮ ಸಂಕಟ ನಮ್ಗೆ ಅರ್ಥವಾಗುತ್ತೆ, ಕೊಲೆಗಾರ ಒಂದೋ ಎರಡೋ ಬಾರಿ ತಪ್ಪಿಸಿಕೊಳ್ಳಬಹುದಷ್ಟೆ, ಮತ್ತೆ ಮತ್ತೆ ಖಂಡಿತಾ